ಅ) ಧಾರವಾಡ ನಗರ ಕ್ಷೇತ್ರದ ಎಷ್ಟು ರಸ್ತೆಗಳಿಗೆ ಹಣ ಬಿಡುಗಡೆ ಮಾಡಲಾಗಿದೆ?

ಆ) ಪ್ರತಿ ಕ್ಷೇತ್ರಕ್ಕೆ 30 ಲಕ್ಷ ಹಣ ಬಿಡುಗಡೆ ಮಾಡುವುದಾಗಿ ತಿಳಿಸಿರುವಂತೆ ಈ ಕ್ಷೇತ್ರಕ್ಕೆ ಎಷ್ಟು ಹಣ ಬಿಡುಗಡೆಯಾಗಿದೆ?

ಇ) ಧಾರವಾಡ ಜಿಲ್ಲಾ ಕ್ಷೇತ್ರ ಹಾಗೂ ಕರ್ನಾಟಕ ಎರಡನೇ ಮಹಾನಗರದಲ್ಲಿ ಬರುವ ಲೋಕೋಪಯೋಗಿ ರಸ್ತೆ ಎಷ್ಟು ಕಿಲೋಮೀಟರ್ ಇದೆ, ಅದಕ್ಕಾಗಿ ಪ್ರತಿ ವರ್ಷದಂತೆ ಬಿಡುಗಡೆಯಾದ ಹಣವೆಷ್ಟು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಧಾರವಾಡ ನಗರ ಕ್ಷೇತ್ರದಲ್ಲಿ 1995-96ನೇ ಸಾಲಿಗೆ ಮುಂದುವರೆದ ಕಾಮಗಾರಿಗಳಿಗೆ ರೂ. 10.00 ಲಕ್ಷ ಅನುದಾನ ಬಿಡುಗಡೆ ಆಗಿದೆ.

ಆ) 1995-96ನೇ ಸಾಲಿನಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರದ ಲೋಕೋಪಯೋಗಿ ಇಲಾಖೆ ರಸ್ತೆಗಳ ಅಭಿವೃದ್ಧಿಯ 30 ಲಕ್ಷ ರೂ.ಗಳ ಕಾರ್ಯಕ್ರಮವಿಲ್ಲ. ಆದರೆ ಕ್ಷೇತ್ರಕ್ಕೆ ಅನುದಾನ ಬಿಡುಗಡೆಯಾಗಿರುವುದಿಲ್ಲ. ಈ ಸಂಬಂಧದಲ್ಲಿ ಮಾನ್ಯ ಶಾಸಕರಿಂದ ದಿನಾಂಕ 13-12-95ರಂದು ಬಂದ ಕಾಮಗಾರಿಗಳ ಯಾದಿ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಹುಬ್ಬಳ್ಳಿ ಧಾರವಾಡ ಮಹಾನಗರ ಸಭೆ ಸರಹದ್ದಿನಲ್ಲಿ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿ 33.85 ಕಿ.ಮೀ.ರಸ್ತೆ ಇರುತ್ತದೆ. 1995-96ನೇ ,ಸಾಲಿನಲ್ಲಿ ಪಾರ್ಷಿಕ ಮತ್ತು ದುರಸ್ತಿಗಾಗಿ ರೂ. 2.60 ಲಕ್ಷ ಬಿಡುಗಡೆಯಾಗಿರುತ್ತದೆ.

ಕುಂದಾಪುರ ತಾಲ್ಲೂಕಿನಲ್ಲಿ ವಿದ್ಯುತ್ ಲೋ.ವೋಲ್ಟೇಜ್ ಸಮಸ್ಯೆ

627 - ಶ್ರೀ ಬಿ.ಎಂ. ಜಯರಾಮ ಶೆಟ್ಟಿ (ಬೈಂದೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಂದಾಪುರ ತಾಲ್ಲೂಕಿನಲ್ಲಿ ವಿದ್ಯುತ್ ಲೋ ವೋಲ್ಟೇಜ್ ಸಮಸ್ಯೆ ಎಷ್ಟು ತಿಂಗಳಿಂದ ಇದೆ. ಹಾಗೂ ಈ ಸಮಸ್ಯೆಯನ್ನು ಬಗೆಹರಿಸುವಲ್ಲಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ. (ವಿವರ ನೀಡುವುದು),

ಆ) ಬೈಂದೂರಿನಲ್ಲಿ ಸಬ್ ಸ್ಟೇಷನ್ ನಿರ್ಮಾಣ ಕಾರ್ಯ ಎಂದಿನಿಂದ ಪ್ರಾರಂಭವಾಯಿತು, ಈ ಸ್ಟೇಷನ್ ನಿರ್ಮಾಣ ಕಾರ್ಯ ವಿಳಂಬದಿಂದ ಆಗಲು ಕಾರಣಗಳೇನು, ಹಾಗೂ ಇದನ್ನು ಯಾವಾಗ ಮುಗಿಸಿ ವಿದ್ಯುತ್ ಸರಬರಾಜು ಮಾಡಲಾಗುವುದು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಕಳೆದ 8-10 ತಿಂಗಳುಗಳಿಂದ ಇದೆ. ಈ ಸಮಸ್ಯೆಯನ್ನು ಪರಿಹರಿಸಲು ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1) ಬೈಂದೂರಿನಲ್ಲಿ 1 X 5 ಎಂ.ವಿ.ಎ., 33:11 ಕೆ.ವಿ.ಉಪ ಕೇಂದ್ರದ ನಿರ್ಮಾಣವನ್ನು ಕೈಗೊಂಡಿದ್ದು, ನಿರ್ಮಾಣ ಕಾರ್ಯವು ಮುಕ್ತಾಯದ ಹಂತದಲ್ಲಿದೆ.

2) ಶಾಲಾಡಿಯಲ್ಲಿ 110:11 ಕೆ.ವಿ. 1X10 ಎಂ.ವಿ.ಎ. ಸಾಮರ್ಥ್ಯದ ಉಪ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಪೂರ್ವ ಭಾವಿ ಕೆಲಸಗಳನ್ನು ಕೈಗೊಳ್ಳಲಾಗಿದೆ. ನಿರ್ಮಾಣ ಕಾರ್ಯವನ್ನು 1996-97ರ ಸಾಲಿನಲ್ಲಿ ಪ್ರಾರಂಭಿಸಲು ಉದ್ದೇಶಿಸಿದೆ.

ಅ) ಏಪ್ರಿಲ್ 93 ರಿಂದ ಪ್ರಾರಂಭವಾಯಿತು. ಈ ಕೆಳಕಂಡ ಮುಖ್ಯ ಕಾರಣಗಳಿಂದ ಸದರಿ ಸಬ್ ಸ್ಟೇಷನ್‌ನ ನಿರ್ಮಾಣ ಕಾರ್ಯದಲ್ಲಿ ವಿಳಂಬ ಉಂಟಾಯಿತು,

1) ಕುಂದಾಪುರ - ಬೈಂದೂರು 33 ಕೆ.ವಿ.ಲೈನ್ ನಿರ್ಮಾಣದಲ್ಲಿ ಹಾಲಾಡಿ ಮತ್ತು ಚಕ್ರಾ ನದಿಗಳ ರಿವರ್ ಕ್ರಾಸಿಂಗ್‌ಗಾಗಿ ಟವರ್‌ಗಳನ್ನು ಹಾಕುವಲ್ಲಿ ಉಂಟಾದ ವಿಳಂಬ.

2) 33ಕೆ.ವಿ., ಲೈನ್‌ನ್ನು ಎಳೆಯುವಾಗ ಗೋದಂಬಿ ತೋಟಗಾರಿಕೆ ಇಲಾಖೆ ಅಧಿಕಾರಿಗಳಿಂದ ಅನುಮತಿ ದೊರೆಯುವಲ್ಲಿ ಉಂಟಾದ ವಿಳಂಬ

3) ಕುಂದಾಪುರ ಬೈಂದೂರು 33 ಕೆ.ವಿ, ಲೈನನನ್ನು ನಿರ್ಮಾಣ ಮಾಡುವಲ್ಲಿ ನ್ಯಾಯಾಲಯಗಳಿಂದ ಬಂದ ತಡೆಯಾಜ್ಞೆಗಳಿಂದ ಉಂಟಾದ ವಿಳಂಬ.

4) 33 ಕೆ.ವಿ., ಲೈನನ್ನು ನಿರ್ಮಾಣ ಮಾಡುವಾಗ ಮಾರ್ಗದಲ್ಲಿನ ಮರದ ಕೊಂಬೆಗಳನ್ನು ಕಡಿಯುವಲ್ಲಿ ಸಾರ್ವಜನಿಕರು ಉಂಟು ಮಾಡಿದ ಅಡಚಣೆಗಳಿಂದ ಉಂಟಾದ ವಿಳಂಬ.

ಸದರಿ ಸಬ್ ಸ್ಟೇಷನ್ ನಿರ್ಮಾಣ ಕಾರ್ಯವು ಮುಕ್ತಾಯ ಘಟ್ಟವನ್ನು ತಲುಪಿದ್ದು, ಮಾರ್ಚ್ 96ರ ಅಂತ್ಯದ ವೇಳೆಗೆ ಈ ಸಬ್ ಸ್ಟೇಷನ್ ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ.

ಉದ್ಯೋಗ ಭರವಸೆ ಯೋಜನೆಯ ಪಟ್ಟಿ.

628 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಉದ್ಯೋಗ ಭರವಸೆ ಯೋಜನೆಯ ಪಟ್ಟಿ ತಯಾರಿಸುವ ಬಗ್ಗೆ ಸರ್ಕಾರವು ತಾಲ್ಲೂಕು ಪಂಚಾಯತ್ ಗಳಿಗೆ ಏನು ನಿರ್ದೇಶನ ನೀಡಿದೆ.

ಆ) ಕಾರ್ಯಕ್ರಮ ಅಡಿಯಲ್ಲಿ ಸರ್ಕಾರ ಎಷ್ಟು ಹಣ ನಿಗಧಿ ಮಾಡಿದೆ ಹಾಗೂ ಯಾವ ಮಾರ್ಗದರ್ಶನದ ಮೇಲೆ ಈ ಹಣ ವಿತರಣೆ ಆಗುವುದು,

ಇ) ಈ ಯೋಜನೆಯಡಿ ಅನುದಾನ ಕಾಮಗಾರಿ ಪಟ್ಟಿ, ಇತ್ಯಾದಿ ವಿಚಾರಗಳಲ್ಲಿ ಶಾಸಕರಿಗೆ ಸರ್ಕಾರವು ಯಾವ ಜವಾಬ್ದಾರಿಯನ್ನು ಹಂಚಿಕೊಟ್ಟಿದೆ,